## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸುವ ಸಲುವಾಗಿ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ (ಸೋಷಿಯೋ ಎಕನಾಮಿಕ್ ಅಂಡ್ ಕ್ಯಾಸ್ಟ್ ಸೆನ್ಸಸ್) ಯನ್ನು ಪರಿಣಾಮಕಾರಿಯಾಗಿ ನಡೆಸುವ ಬಗ್ಗೆ.

ಓದಲಾಗಿದೆ :
1) ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರು ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಬರೆದ ಅ.ಸ. ಪತ್ರ ಸಂಖ್ಯೆ : ಕ್ಯೂ 14016/6/ 2011/ಎ1 (ಆರ್‌ಡಿ) ದಿನಾಂಕ 30-05-2011
2) ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಪತ್ರ ಸಂಖ್ಯೆ : ಕ್ಯೂ 14016/6/ 2011/ಎ1 (ಆರ್‌ಡಿ) ದಿನಾಂಕ 13-06-2011
3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ ಸಂಖ್ಯೆ : ಆರ್‌ಡಿಪಿ 16 ಎಸ್‌ಜೆವೈ 2011 (ಎ1) ದಿನಾಂಕ 18-07-2011.

ಪ್ರಸ್ತಾವನೆ :

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಪ್ರತಿ 5 ವರ್ಷಕ್ಕೊಮ್ಮೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸುವ ಸಲುವಾಗಿ ಗ್ರಾಮೀಣ ಪ್ರದೇಶದಲ್ಲಿ ಗಣತಿ ಕಾರ್ಯ ನಡೆಸುತ್ತಿದೆ. ರಾಜ್ಯವು ಈ ಹಿಂದೆ 2004 ರಲ್ಲಿ ಸರ್ವ ಕುಟುಂಬ ಸಮೀಕ್ಷೆಯ ಹೆಸರಿನಲ್ಲಿ ಗಣತಿ ಕಾರ್ಯ ಕೈಗೊಂಡು ಪೂರ್ಣಗೊಳಿಸಿದೆ.

ಪ್ರಸ್ತುತ ಗಣತಿ ಪ್ರಕ್ರಿಯೆ 2007 ರಲ್ಲಿ ಪ್ರಾರಂಭಗೊಂಡಿದ್ದು, 2011 ರಲ್ಲಿ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿಯನ್ನು ಕೈಗೊಳ್ಳುವಂತೆ ಓದಲಾಗಿದೆ (1) ರಲ್ಲಿ ನಿರ್ಧರಿಸಿದೆ. ಪ್ರಸಕ್ತ ಗಣತಿಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಪ್ರಥಮ ಬಾರಿಗೆ ಪಟ್ಟಣ ಪ್ರದೇಶಗಳಲಿ ತೆಗೆದುಕೊಳ್ಳಲು ಉದ್ದೇಶಿಸಿದೆ. ಇದರೊಂದಿಗೆ ಸ್ವಾತಂತ್ರ್ಯಾ ನಂತರ ಪ್ರಥಮ ಬಾರಿಗೆ ಜಾತಿ ಗಣತಿಯನ್ನು ಸಹ ತೆಗೆದುಕೊಳ್ಳಲಾಗುತ್ತಿದೆ. ಇದರಂತೆ ರಾಜ್ಯದಲ್ಲಿಯೂ ಗಣತಿ ಕಾರ್ಯ ಕೈಗೊಳ್ಳಬೇಕಾಗಿದೆ. ಗಣತಿಯನ್ನು 2 ಹಂತಗಳಲ್ಲಿ (1) ನವೆಂಬರ್ 2011 (2) ಡಿಸೆಂಬರ್ 2011 ರಲ್ಲಿ ನಡೆಸಬೇಕಾಗಿದೆ.

ಓದಲಾಗಿದೆ (3) ರನ್ವಯ ದಿನಾಂಕ 06-07-2011 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ, ಈ ಗಣತಿ ಕಾರ್ಯಕ್ಕಾಗಿ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮಿತಿಗಳ ರಚನೆ ಹಾಗೂ ನೋಡಲ್ ಅಧಿಕಾರಿಗಳನ್ನು ನೇಮಿಸಬೇಕಾಗಿದೆ. ಆದುದರಿಂದ ಈ ಆದೇಶ,

### *ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 29 ಎಸ್‌ಜೆವೈ 2011 (ಎ-1), ಬೆಂಗಳೂರು, ದಿನಾಂಕ : 03-08-2011*

ರಾಜ್ಯ ಸರ್ಕಾರವು ಸಾಮಾಜಿಕ ಆರ್ಥಿಕ ಹಾಗೂ ಜಾತಿ ಗಣತಿ 2011 ನಡೆಸಲು ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಸಮಿತಿಗಳನ್ನು ರಚಿಸಲು ಹಾಗೂ ನೋಡಲ್ ಅಧಿಕಾರಿಗಳನ್ನು ನೇಮಿಸಲು ಮಂಜೂರಾತಿ ನೀಡಿದೆ.

ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ: (**State Level Empowered Committee**)

| ಕ್ರಮ ಸಂಖ್ಯೆ | ಅಧಿಕಾರಿಯ ಪದನಾಮ | |
|---|---|---|
| 1 | ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು | ಅಧ್ಯಕ್ಷರು |
| 2 | ಅಪರ ಮುಖ್ಯ ಕಾರ್ಯದರ್ಶಿಗಳು, ಹಾಗೂ ಅಭಿವೃದ್ಧಿ ಆಯುಕ್ತರು, ಬೆಂಗಳೂರು | ಸದಸ್ಯರು |
| 3 | ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು | ಸದಸ್ಯರು |
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು | ಸದಸ್ಯರು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು | ಸದಸ್ಯರು |
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು | ಸದಸ್ಯರು |
| 7 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೊರು | ಸದಸ್ಯರು |
| 8 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |

| | | |
|---|---|---|
| 9 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು | ಸದಸ್ಯರು |
| 10 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು | ಸದಸ್ಯರು |
| 11 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು | ಸದಸ್ಯರು |
| 12 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಪ್ರೌಢ) ಬೆಂಗಳೂರು | ಸದಸ್ಯರು |
| 13 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ) ಬೆಂಗಳೂರು | ಸದಸ್ಯರು |
| 14 | ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು | ಸದಸ್ಯರು |
| 15 | ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 16 | ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು | ಸದಸ್ಯರು |
| 17 | ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು | ಸದಸ್ಯರು |
| 18 | ಆಯುಕ್ತರು, ಪೌರಾಡಳಿತ ಇಲಾಖೆ, ಬೆಂಗಳೂರು | ಸದಸ್ಯರು |
| 19 | ಆಯುಕ್ತರು, ಪೂರ್ವ ಪದವಿ ಶಿಕ್ಷಣ ಮಂಡಳಿ, ಮಲೇಶ್ವರಂ, ಬೆಂಗಳೂರು | ಸದಸ್ಯರು |
| 20 | ಆಯುಕ್ತರು, ಕಾಲೇಜು ಶಿಕ್ಷಣ, ತಾಂತ್ರಿಕ ಶಿಕ್ಷಣ ಕಟ್ಟಡ, ಪ್ಯಾಲೇಸ್ ರಸ್ತೆ, ಬೆಂಗಳೂರು | ಸದಸ್ಯರು |
| 21 | ನಿರ್ದೇಶಕರು, ಸೆನ್ಸ್ ಆಪರೇಷನ್ಸ್ ಇನ್ ಕರ್ನಾಟಕ, ಬೆಂಗಳೂರು | ಸದಸ್ಯರು |
| 22 | ರಾಜ್ಯ ಮಾಹಿತಿ ಅಧಿಕಾರಿ, ಎನ್ಐಸಿ, ಬೆಂಗಳೂರು | ಸದಸ್ಯರು |
| 23 | ಬಿಇಎಲ್ ಪ್ರತಿನಿಧಿ, ಬೆಂಗಳೂರು | ಸದಸ್ಯರು |
| 24 | ನಿರ್ದೇಶಕರು (ಸ್ವಉಕಾ) ಹಾಗೂ ಪ/ನಿ. ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

**ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು :**

- ❖ ಸಮಿತಿಯು ಅವಶ್ಯಕತೆಗನುಗುಣವಾಗಿ ಯಾವುದೇ ಅಧಿಕಾರಿಗಳನ್ನು ಸಮಿತಿಗೆ ಸೇರ್ಪಡಿಸಿಕೊಳ್ಳಬಹುದು.
- ❖ ಅವಶ್ಯಕತೆಗೆ ಅನುಗುಣವಾಗಿ ಸಭೆ ಸೇರಿ ಉಸ್ತುವಾರಿ ಮತ್ತು ಪ್ರಗತಿ ಪರಿಶೀಲನೆ ನಡೆಸುವುದು.

**ಗ್ರಾಮೀಣ ಗಣತಿಯ ರಾಜ್ಯ ಮಟ್ಟದ ಉಪ ಸಮಿತಿ:**

| ಕ್ರಮ ಸಂಖ್ಯೆ | ಅಧಿಕಾರಿಯ ಪದನಾಮ | |
|---|---|---|
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು | ಅಧ್ಯಕ್ಷರು |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು | ಸದಸ್ಯರು |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು | ಸದಸ್ಯರು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ) ಬೆಂಗಳೂರು | ಸದಸ್ಯರು |
| 7 | ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು | ಸದಸ್ಯರು |
| 8 | ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 9 | ನಿರ್ದೇಶಕರು, ಸೆನ್ಸ್ ಆಪರೇಷನ್ಸ್ ಇನ್ ಕರ್ನಾಟಕ, ಬೆಂಗಳೂರು | ಸದಸ್ಯರು |
| 10 | ರಾಜ್ಯ ಮಾಹಿತಿ ಅಧಿಕಾರಿ, ಎನ್ಐಸಿ, ಬೆಂಗಳೂರು | ಸದಸ್ಯರು |
| 11 | ಬಿಇಎಲ್ ಪ್ರತಿನಿಧಿ, ಬೆಂಗಳೂರು | ಸದಸ್ಯರು |
| 12 | ನಿರ್ದೇಶಕರು (ಸ್ವಉಕಾ) ಹಾಗೂ ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

**ಗ್ರಾಮೀಣ ಗಣತಿಯ ರಾಜ್ಯ ಮಟ್ಟದ ಉಪ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು:**

- ❖ ಸಮಿತಿಯು ಅವಶ್ಯಕತೆಗನುಗುಣವಾಗಿ ಯಾವುದೇ ಅಧಿಕಾರಿಗಳನ್ನು ಸಮಿತಿಗೆ ಸೇರ್ಪಡಿಸಿಕೊಳ್ಳಬಹುದು.
- ❖ ರಾಜ್ಯ ಮಟ್ಟದ ಉಪ ಸಮಿತಿ 15 ದಿನಗಳಿಗೊಮ್ಮೆ ಕನಿಷ್ಠ 1 ಸಭೆಯನ್ನು ಗಣತಿಯ ಪ್ರಗತಿ ಪರಿಶೀಲಿಸಲು ನಡೆಸುವುದು.
- ❖ ಗಣತಿ ಕಾರ್ಯದ ಕುರಿತು ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ

- ❖ ರಾಜ್ಯದಲ್ಲಿ ಕೈಗೊಳ್ಳಲಾಗುವ ಪ್ರಥಮ ಹಾಗೂ ದ್ವಿತೀಯ ಹಂತಗಳಲ್ಲಿ ಗಣತಿ ಕಾರ್ಯಕ್ಕೆ ಜಿಲ್ಲೆಗಳನ್ನು ಗುರುತಿಸುವುದು.
- ❖ ಅಗ್ಗಿಂದಾಗ್ಗೆ ಗಣತಿ ಕಾರ್ಯದ ಕುರಿತು ಪ್ರಗತಿ ಪರಿಶೀಲನೆ ನಡೆಸುವುದು.

<u>ರಾಜ್ಯ ಮಟ್ಟದ ನೋಡಲ್ ಅಧಿಕಾರಿಯವರ ನೇಮಕ ಮತ್ತು ಅವರ ಕರ್ತವ್ಯ ಮತ್ತು ಜವಾಬ್ದಾರಿ :</u>

- ❖ ನಿರ್ದೇಶಕರು (ಸ್ವಉಕಾ) ಹಾಗೂ ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು ರವರನ್ನು ಗ್ರಾಮೀಣ ಹಾಗೂ ನಗರ ಪ್ರದೇಶದ ಗಣತಿ ಕಾರ್ಯದ ರಾಜ್ಯ ಮಟ್ಟದ ನೋಡಲ್ ಅಧಿಕಾರಿಯಾಗಿದ್ದು, ಗಣತಿ ಕಾರ್ಯದ ಎಲ್ಲಾ ಪ್ರಾಸಂಗಿಕ ಕ್ರಮಗಳನ್ನು ಕೈಗೊಂಡು, ಗಣತಿ ಕಾರ್ಯದ ಪ್ರಗತಿಯನ್ನು ಅಗ್ಗಿಂದಾಗ್ಗೆ ಕೇಂದ್ರ ಸರ್ಕಾರಕ್ಕೆ ನೀಡುವುದು.
- ❖ ಕೇಂದ್ರ ಸರ್ಕಾರ ಆಗ್ಗಿಂದಾಗ್ಗೆ ನೀಡುವ ಮಾಹಿತಿಗಳನ್ನು ಕನ್ನಡಕ್ಕೆ ತರ್ಜುಮೆಗೊಳಿಸಿ ಸಂಬಂಧಿಸಿದವರಿಗೆ ನೀಡುವುದು.
- ❖ ಅಗ್ಗಿಂದಾಗ್ಗೆ ಗಣತಿ ಕಾರ್ಯದ ಕುರಿತು ಪ್ರಗತಿ ಪರಿಶೀಲನೆ ನಡೆಸುವುದು.

<u>ರಾಜ್ಯ ಮಟ್ಟದ ನಗರ ಪ್ರದೇಶದ ನೋಡಲ್ ಅಧಿಕಾರಿಯವರ ನೇಮಕ ಮತ್ತು ಅವರ ಕರ್ತವ್ಯ ಮತ್ತು ಜವಾಬ್ದಾರಿ:</u>

- ❖ ಆಯುಕ್ತರು, ಪೌರಾಡಳಿತ ಇಲಾಖೆ, ಬೆಂಗಳೂರು ರವರನ್ನು ನಗರ ಪ್ರದೇಶದ ಗಣತಿಯ ನೋಡಲ್ ಅಧಿಕಾರಿಗಳಾಗಿದ್ದು, ನಗರದ ಪ್ರದೇಶದ ಗಣತಿ ಕಾರ್ಯದ ಎಲ್ಲಾ ಪ್ರಾಸಂಗಿಕ ಕ್ರಮಗಳನ್ನು ಕೈಗೊಂಡು, ಮಾಹಿತಿಯನ್ನು ರಾಜ್ಯ ಮಟ್ಟದ ನೋಡಲ್ ಅಧಿಕಾರಿಯವರಿಗೆ ನೀಡುವುದು.

<u>ಜಿಲ್ಲಾ ಮಟ್ಟದ ಸಮಿತಿ:</u>

| ಕ್ರಮ ಸಂಖ್ಯೆ | ಅಧಿಕಾರಿಯ ಪದನಾಮ | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು | ಉಪಾಧ್ಯಕ್ಷರು |
| 3 | ಸೂಪರಿಂಟೆಂಡೆಂಟ್ ಆಫ್ ಪೋಲೀಸ್ | ಸದಸ್ಯರು |
| 4 | ಜಿಲ್ಲಾ ಆರೋಗ್ಯಾಧಿಕಾರಿಗಳು | ಸದಸ್ಯರು |
| 5 | ಡಿಡಿಪಿಐ, ಶಿಕ್ಷಣ ಇಲಾಖೆ | ಸದಸ್ಯರು |
| 6 | ಜಂಟಿ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| 7 | ಸಿಎಂಸಿ/ ಕಾರ್ಪೋರೇಷನ್ ಆಯುಕ್ತರು / ಆಡಳಿತಾಧಿಕಾರಿಗಳು | ಸದಸ್ಯರು |
| 8 | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | ಸದಸ್ಯರು |
| 9 | ಜಿಲ್ಲಾ ಸೆನ್ಸಸ್ ಅಧಿಕಾರಿಗಳು | ಸದಸ್ಯರು |
| 10 | ಜಿಲ್ಲಾ ಎನ್.ಐ.ಸಿ ಅಧಿಕಾರಿಗಳು | ಸದಸ್ಯರು |
| 11 | ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು | ಸದಸ್ಯರು |
| 12 | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು | ಸದಸ್ಯರು |
| 13 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಸದಸ್ಯರು |
| 14 | ಜಿಲ್ಲಾ ಮಾಹಿತಿ ಮತ್ತು ಪ್ರಚಾರಾಧಿಕಾರಿಗಳು | ಸದಸ್ಯರು |
| 15 | ಅಗ್ರ ಜಿಲ್ಲಾ ವ್ಯವಸ್ಥಾಪಕರು | ಸದಸ್ಯರು |
| 16 | ಯೋಜನಾ ನಿರ್ದೇಶಕರು (ಡಿಆರ್‌ಡಿಎ) | ಸದಸ್ಯರು |
| 17 | ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಸದಸ್ಯ ಕಾರ್ಯದರ್ಶಿ |

<u>ಜಿಲ್ಲಾ ಮಟ್ಟದ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿ :</u>

- ❖ ಸಮಿತಿ 15 ದಿನಗಳಿಗೊಮ್ಮೆ ಕನಿಷ್ಠ 1 ಸಭೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಸಭೆ ಸೇರಿ ಗಣತಿಯ ಪ್ರಗತಿ ಪರಿಶೀಲಿಸಲು ನಡೆಸುವುದು.

- ❖ ಗಣತಿಗೆ ಅವಶ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಛಾರ್ಜ್ ಆಫೀಸ್ ಗೆ ಅವಕಾಶ ಕಲ್ಪಿಸುವುದು.
- ❖ ಜಿಲ್ಲೆಯಲ್ಲಿರುವ 4 ಎನ್ಯೂಮರೇಷನ್ ಬ್ಲಾಕ್ (ಇ.ಬಿ) ನ ಆಧಾರದ ಮೇಲೆ ಒಬ್ಬ ಗಣತಿದಾರರನ್ನು ಹಾಗೂ 6 ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನು ಅಥವಾ ಸಂದರ್ಭಕ್ಕೆ ಅನುಗುಣವಾಗಿ ನೇಮಕ ಮಾಡಲು ಕ್ರಮ ಕೈಗೊಳ್ಳುವುದು.
- ❖ ಗಣತಿಗೆ ಅವಶ್ಯವಿರುವ ಸಿಬ್ಬಂದಿ ಗುರುತಿಸಿ, ನೇಮಕ ಮಾಡುವ ಅಧಿಕಾರವನ್ನು ಸಮಿತಿ ನಿರ್ಧರಿಸಿ ನಾಮಾಂಕಿತಗೊಳಿಸುವುದು.
- ❖ ರಾಜ್ಯ ಮಟ್ಟದಲ್ಲಿ ತರಬೇತಿ ಪಡೆಯುವ ಸಲುವಾಗಿ ಜಿಲ್ಲೆಯ ಇಬ್ಬರು ಮಾಸ್ಟರ್ ಟ್ರೈನರ್ ಫೆಸಿಲಿಟೇಟರ್ಸ್‌ಗಳನ್ನು ಗುರುತಿಸುವುದು
- ❖ ಜಿಲ್ಲಾ ಮಟ್ಟದ ಸಮಿತಿ ಸದಸ್ಯರು ಆಯಾ ಹಂತಗಳಲ್ಲಿ ನಡೆಯುವ ಗಣತಿ ತರಬೇತಿ ಕಾರ್ಯಕ್ರಮದಲ್ಲಿ ತಪ್ಪದೇ ಭಾಗವಹಿಸುವಲ್ಲಿ ಕ್ರಮ ವಹಿಸುವುದು

<u>ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿ ನೇಮಕ ಮತ್ತು ಕರ್ತವ್ಯಗಳು</u>

- ❖ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಆಯಾ ಜಿಲ್ಲೆಗಳ ನೋಡಲ್ ಅಧಿಕಾರಿಯಾಗಿ ನೇಮಿಸಿದೆ.
- ❖ ಸರ್ಕಾರಗಳು ನೀಡುವ ನಿರ್ದೇಶನದಂತೆ ಗಣತಿ ಕಾರ್ಯದ ಎಲ್ಲಾ ಪ್ರಾಸಂಗಿಕ ಕ್ರಮಗಳನ್ನು ನಿಗದಿತ ವೇಳಾ ಪಟ್ಟಿಯಂತೆ ಅನುಸರಿಸಿ, ಪ್ರಗತಿ ಪರಿಶೀಲನೆ ನಡೆಸುವುದು.
- ❖ ನಿಗದಿತ ಸಮಯದ ಲ್ಲಿ ಸರ್ಕಾರಕ್ಕೆ ಎಲ್ಲಾ ಮಾಹಿತಿಗಳನ್ನು ಪೂರೈಸುವುದು.
- ❖ ಎಲ್ಲಾ ಹಂತಗಳಲ್ಲಿ ಗಣತಿಗೆ ಬೇಕಾದ ಅಧಿಕಾರಿ / ನೌಕರರನ್ನು ನೇಮಕ ಮಾಡುವುದು.

<u>ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಇವರ ಕರ್ತವ್ಯಗಳು</u>

- ❖ ಜಿಲ್ಲೆಯ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಇವರು ಗಣತಿ ಕಾರ್ಯಕ್ಕೆ ಬೇಕಾಗುವ ಮುದ್ರಣ ಮತ್ತು ಲೇಖನ ಸಾಮಗ್ರಿಗಳನ್ನು ಪೂರೈಸುವುದು.
- ❖ ಬಿಇಎಲ್ ಅಧಿಕಾರಿಗಳೊಂದಿಗೆ ಸಂಪರ್ಕಿಸಿ ಗಣತಿಗೆ ಅವಶ್ಯವಿರುವ ಟ್ಯಾಬ್ಲೆಟ್ ಪಿಸಿ ಸರ್ಮಪಕ ಸರಬರಾಜು ಆಗಿರುವ ಬಗ್ಗೆ ನಿಗಾ ವಹಿಸುವುದು.

<u>ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಕರ್ತವ್ಯಗಳು</u>

- ❖ ಗಣತಿ ಕಾರ್ಯಕ್ಕೆ ತಗಲುವ ವೆಚ್ಚವನ್ನು ಈಗಾಗಲೇ ಬಿಪಿಎಲ್ ಸೆನಸ್ಸ್‌ಗಾಗಿ ಬಿಡುಗಡೆ ಮಾಡಿರುವ ಅನುದಾನದಿಂದಲೇ ಭರಿಸುವುದು.

ತಾಲ್ಲೂಕು <u>ಮಟ್ಟದ ಸಮಿತಿ:</u>

| ಕ್ರಮ ಸಂಖ್ಯೆ. | ಅಧಿಕಾರಿಯ ಪದನಾಮ | |
|---|---|---|
| 1 | ಉಪ ವಿಭಾಗಾಧಿಕಾರಿಗಳು | ಅಧ್ಯಕ್ಷರು |
| 2 | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ | ಸದಸ್ಯರು |
| 3 | ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| 4 | ಸಿಡಿಪಿಓ | ಸದಸ್ಯರು |
| 5 | ತಾಲ್ಲೂಕು ಆರೋಗ್ಯಾಧಿಕಾರಿಗಳು | ಸದಸ್ಯರು |
| 6 | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು | ಸದಸ್ಯರು |
| 7 | ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ / ಸರ್ಕಲ್ ಇನ್ಸಪೆಕ್ಟರ್ ಆಫ್ ಪೋಲೀಸ್ | ಸದಸ್ಯರು |
| 8 | ಬ್ಲಾಕ್ ಶಿಕ್ಷಣಾಧಿಕಾರಿಗಳು | ಸದಸ್ಯರು |
| 9 | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು / ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಪ್ರತಿನಿಧಿ | ಸದಸ್ಯರು |
| 10 | ತಹಶಿಲ್ದಾರರು | ಸದಸ್ಯ ಕಾರ್ಯದರ್ಶಿ |

<u>ತಾಲ್ಲೂಕು ಮಟ್ಟದ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿ :</u>

- ❖ ಸರ್ಕಾರ ಮತ್ತು ಜಿಲ್ಲಾ ಸಮಿತಿಗಳು ಅಗ್ಗಿಂದಾಗ್ಗೆ ನೀಡುವ ನಿರ್ದೇಶನದಂತೆ ನಿಗದಿತ ಅವಧಿಯೊಳಗೆ ಗಣತಿ ಕಾರ್ಯ ಸಮರ್ಪಕ ವಾಗಿ ನಡೆಯುತ್ತಿರುವ ಬಗ್ಗೆ ನಿಗಾ ವಹಿಸುವುದು
- ❖ ಸಮಿತಿ 15 ದಿನಗಳಿಗೊಮ್ಮೆ ಕನಿಷ್ಠ 1 ಸಭೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಸಭೆ ಸೇರಿ ಗಣತಿಯ ಪ್ರಗತಿ ಪರಿಶೀಲಿಸಲು ನಡೆಸುವುದು.
- ❖ ಮಾಹಿತಿಯನ್ನು ಜಿಲ್ಲಾ ಮಟ್ಟದಲ್ಲಿ ಕ್ರೋಢಿಕರಣವಾಗುವಲ್ಲಿ ಕ್ರಮ ವಹಿಸುವುದು.
- ❖ ತಾಲ್ಲೂಕಿನಲ್ಲಿರುವ 4 ಎನ್ಯೂಮರೇಷನ್ ಬ್ಲಾಕ್ (ಇ.ಬಿ) ನ ಆಧಾರದ ಮೇಲೆ ಒಬ್ಬ ಗಣತಿದಾರರನ್ನು ಹಾಗೂ 6 ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನು ಅಥವಾ ಸಂದರ್ಭಕ್ಕೆ ಅನುಗುಣವಾಗಿ ಬೇಕಾಗುವ ಸಿಬ್ಬಂದಿಯ ಮಾಹಿತಿಯನ್ನು ಜಿಲ್ಲಾ ಸಮಿತಿಗೆ ಒದಗಿಸುವುದು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಗಣತಿಯ ಬಗ್ಗೆ ಅಗ್ಗಿಂದಾಗ್ಗೆ ನೀಡುವ ಎಲ್ಲಾ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸಿ ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

3/7/14

(ಡಾ: ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ :
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಕೋರಲಾಗಿದೆ. (ಎರಡು ಪ್ರತಿಗಳು).
ಪ್ರತಿ :

1) ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಗುಲ್ಬರ್ಗಾ, ಬೆಳಗಾಂ ವಿಭಾಗಗಳು.
2) ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ
3) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳಿಗೆ
4) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
5) ಜಿಲ್ಲಾ ಮಟ್ಟದ ಸಮಿತಿಯ ಸದಸ್ಯರುಗಳಿಗೆ – ಜಿಲ್ಲಾ ಮಟ್ಟದ ಸದಸ್ಯ ಕಾರ್ಯದರ್ಶಿಯವರ ಮೂಲಕ.
6) ಎಲ್ಲಾ ತಾಲ್ಲೂಕು ಮಟ್ಟದ ಸಮಿತಿಯ ಸದಸ್ಯರುಗಳಿಗೆ – ತಾಲ್ಲೂಕು ಮಟ್ಟದ ಸದಸ್ಯ ಕಾರ್ಯದರ್ಶಿಯವರ ಮೂಲಕ.
7) ರಾಜ್ಯದ ಎಲ್ಲಾ ತಾಲ್ಲೂಕು ತಹಶಿಲ್ದಾರರುಗಳಿಗೆ – ಜಿಲ್ಲಾಧಿಕಾರಿಗಳ ಮೂಲಕ.
8) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ – ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ.
9) ಆಯುಕ್ತರು, ಪೂರ್ವ ಪದವಿ ಶಿಕ್ಷಣ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು
10) ಆಯುಕ್ತರು, ಕಾಲೇಜು ಶಿಕ್ಷಣ, ತಾಂತ್ರಿಕ ಶಿಕ್ಷಣ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು
11) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು
12) ಆಯುಕ್ತರು, ಪೌರಾಡಳಿತ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು
13) ನಿರ್ದೇಶಕರು, ಸೆನ್ಸ್‌ಸ್ ಆಪರೇಷನ್ಸ್ ಇನ್ ಕರ್ನಾಟಕ, ಇ ಅಂಡ್ ಎಫ್ ವಿಂಗ್ಸ್, 7ನೇ ಮಹಡಿ ಭಾರತ ಸರ್ಕಾರ, ಕೇಂದ್ರಿಯ ಸದನ, ಕೋರಮಂಗಲ, ಬೆಂಗಳೂರು–34.
14) ರಾಜ್ಯ ಮಾಹಿತಿ ಅಧಿಕಾರಿ, ಎನ್‌ಐಸಿ, ವಿಶ್ವೇಶ್ವರಯ್ಯ ಮಿನಿ ಗೋಪುರ, ಬೆಂಗಳೂರು
15) ಜನರಲ್ ಮ್ಯಾನೇಜರ್, ಹೆಚ್.ಆರ್. ಆಫೀಸ್, ಬಿ.ಇ.ಎಲ್, ಜಾಲಹಳ್ಳಿ ಅಂಚೆ, ಬೆಂಗಳೂರು–13.
16) ಮಾನ್ಯ ಗ್ರಾಅಪಂರಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
17) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
18) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ,

19) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ,
20) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು
21) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು
22) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾಅಪಂರಾ ಇಲಾಖೆ, ಬೆಂಗಳೂರು
23) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
24) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ,
25) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆಪ್ತ ಕಾರ್ಯದರ್ಶಿಗಳು,ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ
26) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು
27) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ,
28) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆಪ್ತ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ) ಬೆಂಗಳೂರು
29) ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು
30) ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ,
31) ಸರ್ಕಾರದ ಕಾರ್ಯದರ್ಶಿ, ಗ್ರಾಅಪಂರಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ.
32) ಸರ್ಕಾರದ ಕಾರ್ಯಧರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ.
33) ನಿರ್ದೇಶಕರು (ಸ್ವಉಕಾ) ಮತ್ತು ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಗ್ರಾಅಪಂರಾ ಇಲಾಖೆ ಇವರ ಆಪ್ತ ಸಹಾಯಕರಿಗೆ.
34) ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು, ಕರ್ನಾಟಕ ವಿಕಾಸ, ಗ್ರಾಅಪಂರಾ ಇಲಾಖೆ.
35) ಗಣಕ ಕೇಂದ್ರ
36) ಹೆಚ್ಚಿನ ಪ್ರತಿ.

***